ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Monday, the 21st August, 1978/Shravana 30, 1900 S.E.

The House met in the Assembly Chamber, Vidhana Soudha, at One of the Clock.

[MADAM DEPUTY SPEAKER (SMT. SUMATI B. MADIMAN) in the Chair]

STARRED QUESTIONS
(to which oral answers were given)

Village Accountants in Belgaum

99. SRI S. S. ARAKERI (Balloli)—Will the Minister for Revenue be pleased to state:—

(*a*) the total number of village Accountants in Belgaum Division ;

(*b*) the number of Village Accountants belonging to Scheduled Castes/Tribes ;

(*c*) whtther there is a Government Order relating to the promotion of the Village Accountants ;

(*d*) the percentage fixed for the Village Accountants to be promoted to the cadre of 1st Division Clerk and 1st Division Revenue Inspector ;

(*e*) whether Village Accountants have been promotod since the date of the Notification No. RD 4 ASD 77, dated 26th December, 1977 ;

(*f*) if not promoted, the reasons for the same ?

SRI B. BASAVALINGAPPA (Minister for Revenue)—

(*a*) 2,054.

(*b*) Scheduled Caste 257.
Scheduled Tribes 6

(*c*) Yes.

(*d*) 40 per cent with effect from 26th December 1977

(*e*) No.

(*f*) There are no vacancies of First Division Clerks/Revenue Inspectors in Belgaum Division at present.

ಶ್ರೀ ಎಸ್. ಎಸ್. ಅರಕೇರಿ.—ಬೆಳಗಾಂ ವಿಭಾಗದಲ್ಲಿರುವ ವಿಲೇಜ್ ಅಕೌಂಟೆಂಟ್‌ಗಳ ಒಟ್ಟು ಸಂಖ್ಯೆ ೨,೦೫೪ ಎಂದು ಹೇಳಿದ್ದೀರಿ, ಇದರಲ್ಲಿ ಅನುಸೂಚಿತ ಜಾತಿ ೨೫೭ ಮತ್ತು ಅನುಸೂಚಿತ ಆದಿಮ ಜಾತಿ ೬ ಎಂದು ತಾವು ಹೇಳಿರುತ್ತೀರಿ. ಇದರಲ್ಲಿ ಸರಾಸರಿ ಆವರೇಜ್ ಪೆಡ್ಯೂಲ್ ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್ ಜನಾಂಗದವರನ್ನು ೧೮ ಪರ್ಸೆಂಟ್ ಪ್ರಕಾರವಾಗಿ ತುಂಬುವ ಪ್ರಯತ್ನ ಮಾಡಿಲ್ಲ. ಆದ್ದರಿಂದ ದಯವಿಟ್ಟು ೧೮ ಪರ್ಸೆಂಟ್ ಪ್ರಕಾರ ತುಂಬುವ ಪ್ರಯತ್ನವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ,

† ಶ್ರೀ ಬಿ, ಬಸವಲಿಂಗಪ್ಪ.—ತಾವು ಹೇಳತಕ್ಕಂಥ ವಿಷಯ ಸರಿಯಾಗಿರುತ್ತದೆ. ಹಿಂದೆ ರಿಕ್ರೂಟ್ ಮಾಡಿರತಕ್ಕಂಥಾದ್ದು ಆ ರೀತಿ ಇರುತ್ತದೆ. ಎಸ್.ಸಿ. ಮತ್ತು ಎಸ್.ಟಿ.ಗೆ ಸರಿಯಾದ ರೀತಿಯಲ್ಲಿ ಪ್ರಾತಿನಿಧ್ಯವನ್ನು ಕೊಡಲಿಕ್ಕೆ ಸರ್ವಪ್ರಯತ್ನವನ್ನೂ ಮಾಡಲಾಗುತ್ತಿದೆ. ರಿಕ್ರೂಟ್‌ಮೆಂಟ್ ಕಮಿಟಿಯವರು ಈಗಿನ ಆಕ್ಟ್ ಪ್ರಕಾರವಾಗಿ D.C. of the District is the Chairman and Assistant Commissioner in charge of headquarter Sub-Division and District Social Welfare Officer are members ಈ ಮೂರು ಜನರು ಇರುತ್ತಾರೆ ಅವರ ಬದಲಾಗಿ ನಾನ್ ಆಫೀಷಿಯಲ್ ಸದಸ್ಯರ ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮಾಡಿ ರಿಕ್ರೂಟ್ ಮಾಡುವ ವ್ಯವಸ್ಥೆಯನ್ನೂ ಕೂಡ ಮಾಡಿರುತ್ತೇವೆ. ಇದರಿಂದ ಈಗ ಏನು ಅನ್ಯಾಯ ನಡೆದಿರುತ್ತದೆ, ಅದನ್ನು ತಪ್ಪಿಸಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ಇದು ಕೇವಲ ಒಂದು ಡಿಪಾರ್ಟ್‌ಮೆಂಟಿನಲ್ಲಿ ಈ ರೀತಿ ನಡೆಯುತ್ತಿಲ್ಲ, ಎಲ್ಲ ಡಿಪಾರ್ಟ್‌ಮೆಂಟ್‌ಗಳಲ್ಲೂ ಈ ರೀತಿ ನಡೆಯುತ್ತಿದೆ. ಆದ್ದರಿಂದ ಏನಾದರೂ ಸ್ಪೆಷಲ್ ರಿಕ್ರೂಟ್‌ಮೆಂಟ್ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳುತ್ತೇನೆ ಡಿವಿಜನಲ್ ರಿಕ್ರೂಟ್‌ಮೆಂಟ್ ಕಮಿಟಿ ಏನು ಇರುತ್ತದೆ, ಅದು ಸರಿಯಾದ ರೀತಿಯಲ್ಲಿ ೧೮ ಪರ್ಸೆಂಟ್ ರೆಕ್ರೂಟ್‌ಮೆಂಟ್ ಮಾಡಿಕೊಳ್ಳುತ್ತಿಲ್ಲ. ಅವರು ಏನಾದರೂ ಮಾಡಿ ೧೮ ಪರ್ಸೆಂಟ್ ಭರ್ತಿ ಮಾಡದಿದ್ದರೆ, ಅವರಿಗೆ ಪ್ರಮೋಷನ ವಗೈರೆ ಕೊಡುವುದನ್ನು ತಡೆಹಿಡಿಯುವ ಯೋಚನೆಯನ್ನೇನಾದರೂ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಸಿವಿಲ್ ಸರ್ವೀಸ್ ಬಿಲ್ ತಮ್ಮ ಮುಂದೆ ಇದೆ. ಇದೆಲ್ಲವನ್ನೂ ಅಳವಡಿಸಿಕೊಂಡೆ ಈ ಬಿಲ್ಲನ್ನು ತರಬೇಕೆಂದಿದ್ದೇವೆ. ಕರ್ನಾಟಕದ ಇತಿಹಾಸದಲ್ಲಿ ಮೊಟ್ಟ ಮೊದಲನೆಯದಾಗಿ ಈ ಸಿವಿಲ್ ಸರ್ವೀಸ್ ಬಿಲ್ಲನ್ನು ನಾವು ತರುತ್ತಿದ್ದೇವೆ. ಇನ್ನು ವೇಕೆನ್ಸಿ ಭರ್ತಿ ಮಾಡುವ ಬಗ್ಗೆ We will try to fill up these vacancies by special recruitment as you said.

ಶ್ರೀ ಎಸ್. ಎಸ್. ಅರಕೇರಿ.—ವಿಲೇಜ್ ಅಕೌಂಟೆಂಟ್ಸ್ ಇದ್ದವರಿಗೆ ಫರ್ಸ್ಟ್ ಡಿವಿಜನ್ ಕ್ಲಾರ್ಕ್ ಹುದ್ದೆಗೆ ಬಡ್ತಿ, ಮತ್ತು ಮೊದಲದರ್ಜೆಯ ಗುಮಾಸ್ತರಿಂದ ರೆವಿನ್ಯೂ ಇನ್‌ಸ್ಪೆಕ್ಟರ್ ಹುದ್ದೆಗೆ ಪ್ರಮೋಷನ್ ಕೊಡುವ ವಿಚಾರದಲ್ಲಿ ೧೯೭೩ನೇ ಡಿಸೆಂಬರ್ ನಿಂದ ತಡಮಾಡುತ್ತಿದ್ದಾರೆ. ಇದರ ಬಗ್ಗೆ ಡಿವಿಜನ್‌ಗಳ ಮುಖಾಂತರ ಮೂರುಗಳು ಬರುತ್ತಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಕೇಳುತ್ತೇನೆ,

ಶ್ರೀ ಬಿ. ಬಸವಲಿಂಗಪ್ಪ.— ವಾಸ್ತವವಾಗಿ ವೇಕೆನ್ಸಿ ಇನ್ನೂ ಆಗಿಲ್ಲ. ವೇಕೆನ್ಸಿ ಆದಾಗ ಇವರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ನಿಯಮಾವಳಿಗಳನ್ನು ಮಾಡಿರುತ್ತೇವೆ ಆದರ ಪ್ರಕಾರ ಮಾಡುತ್ತಾರೆಂದು ಹೇಳುತ್ತೇನೆ,

ಶ್ರೀ ಎಸ್. ಎಸ್. ಅರಕೇರಿ.—ಒಟ್ಟು ೪೦ ಪರ್ಸೆಂಟ್ ಪ್ರಮೋಷನ್ ಎಂದು ಹೇಳಿರುತ್ತೀರಿ. ಇದರಲ್ಲಿ ಮೊದಲನೇ ದರ್ಜೆ ಮತ್ತು ರೆವಿನ್ಯೂ ಇನ್‌ಸ್ಪೆಕ್ಟರ್‌ಗೆ ಎಷ್ಟು ಪರ್ಸೆಂಟ್ ಪ್ರಮೋಷನ್ ಕೊಡುತ್ತಿರುವುದು ಎನ್ನುವುದರ ಬಗ್ಗೆ ಏನಾದರೂ ಮಾಹಿತಿ ಇರುತ್ತದೆಯೇ

ಶ್ರೀ ಬಿ. ಬಸವಲಿಂಗಪ್ಪ.— ಮೊದಲದರ್ಜೆ ಗುಮಾಸ್ತರಿಗೂ, ರೆವಿನ್ಯೂ ಇನ್ಸ್‌ಪೆಕ್ಟರ್ ಹುದ್ದೆಗೂ ಯಾವ ವಿಧವಾದ ವ್ಯತ್ಯಾಸವೂ ಇರುವುದಿಲ್ಲ. ಇದು ಇಂಟರ್‌ನಲ್ ಜೇಂಜಬಲ್ ಮಾತ್ರ ಆಗಿರುತ್ತದೆ.

---

† Indicate that remarks or Speeches have not been revised by the Member concerned

ಶ್ರೀ ಎಸ್. ಎಸ್. ಆರಕೇರಿ.—ಬೆಳಗಾವಿ ಡಿವಿಜನ್‌ನಲ್ಲಿ ಸುಮಾರು ೧೧೦ ವೇಕೆನ್ಸಿ ಫಿಲಪ್ ಮಾಡುವ ವಿಚಾರ ತಮ್ಮ ಗಮನಕ್ಕೆ ಬಂದಿರುವಂತೆ ರಾಜ್ಯದ ಇತರ ಡಿವಿಜನ್‌ಗಳಲ್ಲಿ ಪೆಡ್ಯೂಲ್ ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್ ಜನರನ್ನು ತುಂಬಿಲ್ಲ. ಇನ್ನು ಮುಂದೆ ತುಂಬಬೇಕಾದ ಅಂಕಿ ಅಂಶಗಳು ಸರ್ಕಾರ ತುಂಬಲು ಪ್ರಯತ್ನ ಮಾಡುತ್ತಿರಾ

ಶ್ರೀ ಬಿ. ಬಸವಲಿಂಗಪ್ಪ.—ಅದು ಸರ್ಕಾರದ ಯೋಚನೆಯಲ್ಲಿದೆ ಎಂದು ತಮಗೆ ತಿಳಿಸುತ್ತೇನೆ.

Collection of unreasonable fees and Donations by Private Institutions

188 Sri T. R. Shamanna (Basavanagudi).—Will the Minister for Education be pleased to state,—

(*a*) whether it has come to the notice of Government that many private bodies in the State running educational institutions are charging unreasonable fees and donotions to parents;

(*b*) the steps that will be taken by Government to arrest such exploitation of poor parents?

Sri B. Subbayya Shetty·—(Minister for Education).—

(*a*) Yes.

(*b*) Circular instructions have been issued to all the Inspecting Officer to check such unauthorised collections. Government are also considering to bring a comprehensive Legislation to prevent such malpractices.

Sri T.R. Shamanna.—It is not practicable to solve the problem by issue of circulars· Will the Government take some stern action to see that exploitation of parents is stopped ?

† Sri B. Subbayya Shetty.—As the hon. member is fully aware, some private schools collect donations from parents These schools are supposed to give accounts regarding collection of donations and the expenses incurred therein, and under the rules the Department has to look into these accounts. But certain private institutions collect donations by forming societies, which are different from the institutions as such. They collect money in the name of the Society. At present the Department do not have the necessary power to audit and inspect the accoun ts of such societies. This is the difficulty which we are facing at present. As has already been stated in this House, we are thinking of getting these societies also into our purview so that we can check up the accounts, fees and do nations collected in its entirety.

ಶ್ರೀ ಟಿ.ಆರ್. ಶಾಮಣ್ಣ.—ಈ ವರ್ಷ ಈ ಸರ್ಕಾರದ ನೀತಿಯಿಂದ ತಾವು ಕೊಟ್ಟಂಥ ಈ ಒಂದು ಸಡಿಲವಾದಂಥಾ ಆರ್ಡರ್‌ನಿಂದ ಖಾಸಗೀ ಮೆಡಿಕಲ್ ಕಾಲೇಜಿನವರು ಮತ್ತು ಖಾಸಗೀ ಇಂಜಿನೀಯರಿಂಗ್ ಕಾಲೇಜಿನವರು ಅತಿ ಹೆಚ್ಚಿನ ಮೊತ್ತದಲ್ಲಿ ಹಣವನ್ನು ವಸೂಲ್ಮಾಡಿರುವುದು ತಮ್ಮ ಗಮನಕ್ಕೆ